ಕೆಲವು ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕರುಗಳು ತಮಗೂ ಹೈದ್ರಾಬಾದ್ ವೇತನ ಶ್ರೇಣಿಯನ್ನು ವಿಸ್ತರಿಸುವಂತೆ ಕೋರಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ನೊಂದಾಯಿಸಿದ್ದು ಪ್ರಕರಣವು ಇತ್ಯರ್ಥವಾಗಿರುವುದಿಲ್ಲ. ನ್ಯಾಯಾಲಯದ ತೀರ್ಪಿಗಾಗಿ ಕಾಯಲಾಗಿದೆ.

ಅನುದಾನ ಸಹಿತ ಪ್ರಾಥಮಿಕ ಶಾಲೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಶಿಕ್ಷಕರಿಗೆ ಗ್ರಾಚ್ಯುಯಿಟಿಗೆ ಸಂಪೂರ್ಣ ಸೇವೆಯನ್ನು ಸಲ್ಲಿಸುತ್ತಿರುವ ಶಿಕ್ಷಕರಿಗೆ ಗ್ರಾಚ್ಯುಯಿಟಿಗೆ ಸಂಪೂರ್ಣ ಸೇವೆಯನ್ನು ಗಣನೆಗೆ ತೆಗೆದುಕೊಳ್ಳುವ ಬಗ್ಗೆ ನೇಮಕಾತಿಯನ್ನು ಇಲಾಖೆಯು ಯಾವ ದಿನಾಂಕದಿಂದ ಅನುಮೋದಿಸಲ್ಪಡುತ್ತದೆಯೋ ಆ ದಿನಾಂಕದಿಂದ ಪರಿಗಣಿಸಲಾಗುವುದು. ಹಾಗೂ ಯಾವುದಾದರೂ ಒಂದು ಅನುದಾನಿತ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿದ್ದು ಕಾರಣಾಂತರದಿಂದ ಆ ಸಂಸ್ಥೆಯು ಶಾಲೆಯನ್ನು ಬಿಟ್ಟು ಬೇರೊಂದು ಅನುದಾನಿತ ಶಾಲೆಯಲ್ಲಿ ನೇಮಕಾತಿಯನ್ನು ಇಲಾಖೆಯಿಂ ಅನುಮೋದಿಸಲ್ಪಟ್ಟಿದ್ದರೆ ಹಿಂದಿನ ಸೇವೆಯನ್ನು ಪರಿಗಣಿಸಬೇಕೆಂಬ ಮನವಿ ಸದರಿ ಶಿಕ್ಷಕರಿಂದ ಬಂದಲ್ಲಿ ಅದನ್ನು ಇಲಾಖೆಯು ಪರಿಶೀಲಿಸುವುದು.

ವೇತನ ಅಲಾಟ್‌ಮೆಂಟ್, ವೈದ್ಯಕೀಯ ಸೌಲಭ್ಯ, ಎಲ್ ಟಿ.ಸಿ. ಸೌಲಭ್ಯ ವಸತಿ ನಿರ್ಮಾಣಕ್ಕೆ ಸಾಲ. ಗ್ರೂಪ್ ಇನ್‌ಷೂರೆನ್ಸ್‌ನಲ್ಲಿ ವ್ಯತ್ಯಾಸ, ಅನುಕಂಪದ ನೆಲೆಯಲ್ಲಿ ನೇಮಕಾತಿಗಳು, ಈ ಸೌಲಭ್ಯಗಳನ್ನು ಖಾಸಗಿ ಅನುದಾನಿತ ಶಾಲೆಗಳಿಗೂ ವಿಸ್ತರಿಸುವ ಕುರಿತಂತೆ ಸರ್ಕಾರವು ಪರಿಶೀಲಿಸಲಾಗುವುದು.

5) ಜಿಲ್ಲಾ ಪರಿಷತ್ತುಗಳ ಆಡಳಿತ ಸುಗಮವಾಗಿ ನಡೆಯಲು ಅಧೀಕ್ಷಕ/ ಅಭಿಯಂತರರನ್ನು ನೇಮಿಸಲು ಮನವಿ

೧-೦೦ ಪಿ. ಎಂ.

ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ರಚನೆಯಾಗಿರುವ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ವ್ಯವಸ್ಥೆಯಲ್ಲಿ ಕಾಮಗಾರಿ, ನೀರಾವರಿ ಮತ್ತು ಆರೋಗ್ಯ ಇಲಾಖೆ ಕೆಲಸಗಳನ್ನು ನಿರ್ವಹಿಸಲು ಜಿಲ್ಲಾ ಪಂಚಾಯತ್ ತಾಂತ್ರಿಕ ಉಪ ವಿಭಾಗ ಹಾಗೂ ಜಿಲ್ಲಾ ಪರಿಷತ್ತು ವಿಭಾಗ ಕಛೇರಿಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಈಗಿರುವ ವ್ಯವಸ್ಥೆಯಲ್ಲಿ ಉಪ ವಿಭಾಗ ಮಟ್ಟದಲ್ಲಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ವಿಭಾಗ ಮಟ್ಟದ ಕಾರ್ಯನಿರ್ವಾಹಕ ಅಭಿಯಂತರರು ತಾಂತ್ರಿಕ ಮಂಜೂರಾತಿಗಾಗಿ ಬೇರೆ ಬೇರೆ ಸರಕಾರಿ ಇಲಾಖೆಯ ಅಧೀಕ್ಷಕ ಅಭಿಯಂತರ ಕಛೇರಿಗಳಿಗೆ ಕಾಗದ ಪತ್ರಗಳನ್ನು ಕಳಿಸಬೇಕಾಗುತ್ತದೆ. ಹಾಗೂ ಹಲವಾರು ಸಲ ಓಡಾಡಬೇಕಾಗುತ್ತದೆ. ಇದರಿಂದಾಗಿ ಸಾಕಷ್ಟು ವ್ಯರ್ಥ ಸಮಯ ಹಾಗೂ ಹಣದ ವ್ಯಯವಾಗುತ್ತಿದೆ. ಅಲ್ಲದೆ ಸಮಯಾನುಸಾರ ಕೆಲಸಗಳು ಆಗುವುದು ಕಷ್ಟ ಸಾಧ್ಯವಾಗಿದೆ. ಇದಲ್ಲದೆ ವಿವಿಧ ಅಧೀಕ್ಷಕ ಅಭಿಯಂತರು ತಾಲ್ಲೂಕುಗಳಲ್ಲಿ ಪ್ರವಾಸ ಮಾಡುವಾಗ ಅಧಿಕಾರಿಗಳು ಅವರ ಜೊತೆಯಲ್ಲಿ ಪ್ರವಾಸ ಹಾಗೂ ಅವರು ವ್ಯವಸ್ಥೆಯಲ್ಲೇ ಸಮಯ ಹಾಳು ಮಾಡಬೇಕಾಗುತ್ತದೆ. ಆದುದರಿಂದ ಜಿಲ್ಲಾ ಪರಿಷತ್ತುಗಳಲ್ಲಿ ಆಡಳಿತ ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಜಿಲ್ಲಾ ಪರಿಷತ್ತಿಗೊಬ್ಬರಂತೆ ಅಧೀಕ್ಷಕ ಅಭಿಯಂತರರನ್ನು ನೇಮಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾಮಗಾರಿ ಮಂತ್ರಿ).— ಆದಷ್ಟು ಬೇಗ ನೇಮಿಸುತ್ತೇವೆ.